a) No

b) Karnataka State Financial Corporation is following the norms for relaxing the collateral security from 30% for all sections of borrowers to 15% for SC/ST enterpreurs.

c) Does not arise.

**ರಾಜ್ಯದಲ್ಲಿರುವ ಗ್ರಾಮ ದಳಪತಿಗಳು**

2514 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಗ್ರಾಮ ದಳಪತಿಗಳ ಸಂಖ್ಯೆ ಎಷ್ಟು?

ಆ) ಅವರಿಗೆ ನೀಡುತ್ತಿರುವ ಗೌರವ ಸಂಬಳ ಪ್ರವಾಸ ಭತ್ಯೆ ಎಷ್ಟು;

ಇ) ಇವರಿಗೆ ನೀಡುತ್ತಿರುವ ಗೌರವ ಸಂಬಳ ಮತ್ತು ಭತ್ಯೆಗಳನ್ನು ಹೆಚ್ಚಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ;

ಈ) ಇವರುಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಇವರಿಗೆ ಅಗತ್ಯವಾದ ಸಲಕರಣೆಗಳನ್ನು ಒದಗಿಸುವ ಬಗ್ಗೆ ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಗ್ರಾಮ ದಳಪತಿಗಳ ಒಟ್ಟು ಸಂಖ್ಯೆ 15673

ಆ) ಅವರಿಗೆ ಇದುವರೆವಿಗೂ ಗೌರವಧನ ಸಂಬಳ ಪ್ರವಾಸ ಭತ್ಯೆಯನ್ನು ನೀಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ದಳಪತಿಗಳು ಮಾಡುವ ಒಳ್ಳೆಯ ಕೆಲಸ ಕಾರ್ಯಗಳಿಗೆ ಪ್ರೋತ್ಸಾಹ ರೂಪಕವಾಗಿ ಬಹುಮಾನ ಯೋಜನೆಯನ್ನು ಹಾಗೂ ಅರ್ಹತಾ ಪತ್ರವನ್ನು ನೀಡುವ ಯೋಜನೆಯನ್ನು ಸರ್ಕಾರವು ಜಾರಿಯಲ್ಲಿ ತಂದಿದೆ. ಬೇರೆ ಯಾವ ಸಲಕರಣೆಯನ್ನು ಒದಗಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದಲ್ಲಿ ಇಲ್ಲ.

**ಬಚಾವತ್ ತೀರ್ಪಿನನ್ವಯ ಗೋದಾವರಿ ನದಿಯ ನೀರಿನ ಉಪಯೋಗ**

2299 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜಿರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಚಾವತ್ ತೀರ್ಪಿನನ್ವಯ ಗೋದಾವರಿ ನದಿ ನೀರಿನಲ್ಲಿ ರಾಜ್ಯದ ಪಾಲಿಗೆ ಎಷ್ಟು ಟಿ.ಎಂ.ಸಿ. ನೀರು ಬರುತ್ತದೆ. (ಹೊರ ಹರಿವು ಮತ್ತು ಒಳ ಹರಿವುದರಲ್ಲಿ ಬರಬೇಕಾದ ನೀರಿನ ಪ್ರಮಾಣದ ಬಗ್ಗೆ ವಿವರಗಳನ್ನು ಒದಗಿಸುವುದು)

ಆ) ರಾಜ್ಯವು ತನ್ನ ಪಾಲಿನ ನೀರನ್ನು ನಿಗದಿತ ಅವಧಿಯಲ್ಲಿ ಅಂದರೆ 2000 ಇಸವಿಯೊಳಗೆ ಉಪಯೋಗಿಸಿಕೊಳ್ಳುವ ಬಗ್ಗೆ ಆಸಕ್ತಿಯನ್ನು ಹೊಂದಿದೆಯೇ?

ಇ) ಈ ಸಂಬಂಧವಾಗಿ ಯಾವ ಯಾವ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ.

ಈ) ಈ ಯೋಜನೆಗಳು ಯಾವ ಹಂತದಲ್ಲಿವೆ:

ಊ) ಕಳೆದ ಎರಡು ವರ್ಷದಲ್ಲಿ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ನಿಗದಿಪಡಿಸಲಾಗಿತ್ತು, ಹಾಗೂ ಖರ್ಚು ಮಾಡಿದ ಮತ್ತು ಬಿಡುಗಡೆ ಮಾಡಿದ ಹಣ ಮೊತ್ತವೆಷ್ಟು?

ಊ) ಸರ್ಕಾರವು ಈ ತೀರ್ಪಿನನ್ವಯ ತನ್ನ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವಲ್ಲಿ ವಿಳಂಬ ಮಾಡುತ್ತಿರುವುದು ನಿಜವೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಬಚಾವತ್ ತೀರ್ಪಿನನ್ವಯ ಗೋದಾವರಿ ನದಿ ನೀರಿನಲ್ಲಿ 22.37 ಟಿಎಂಸಿ ನೀರು ಕರ್ನಾಟಕ ರಾಜ್ಯಕ್ಕೆ ಲಭ್ಯವಾಗಿರುತ್ತದೆ. ಇದಲ್ಲದೆ ಗೋದಾವರಿ ನದಿಯಿಂದ ಕೃಷ್ಣಾ ನದಿಗೆ ಮಾರ್ಗಾಂತರದಿಂದ ಬರುವ ಕರ್ನಾಟಕ ರಾಜ್ಯದ ಪಾಲು 23 ಟಿಎಂಸಿ (ಅಂದರೆ 21 ಟಿಎಂಸಿ + 2 ಟಿಎಂಸಿ ರೀಜನರೇಷನ್)

ಆ) ರಾಜ್ಯದ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲು ತೀರ್ಪಿನಲ್ಲಿ ಯಾವುದೇ ಕಾಲಮಿತಿ ನಿಗದಿಪಡಿಸಿಲ್ಲ.

ಇ) ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಅಡಿಯಲ್ಲಿ ಕಾರಂಜ ಮತ್ತು ಚುಲ್ಕಿ ನಾಲಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಈ) ಕಾರಂಜ ನೀರಾವರಿ ಯೋಜನೆಯ ಅಣೆಕಟ್ಟು ಪೂರ್ತಿಗೊಂಡಿದ್ದು, ಭಾಗಶಃ ನೀರಾವರಿ ಒದಗಿಸಲಾಗಿದೆ. ಕಾಲುವೆಗಳ ಕೆಲಸ ಪ್ರಗತಿಯಲ್ಲಿದೆ. ಚುಲ್ಕಿ ನಾಲಾ ಯೋಜನೆಯ ಭಾಗಶಃ ಕೋಡಿಯ ಹೊರತಾಗಿ ಅಣೆಕಟ್ಟು ಕೆಲಸ ಪೂರ್ತಿಗೊಂಡಿದೆ. ಕಾಲುವೆ ಕೆಲಸಗಳು ಪ್ರಗತಿಯಲ್ಲಿವೆ.

ಉ) ಕಾರಂಜ ಮತ್ತು ಚುಲ್ಕಿನಾಲಾ ಯೋಜನೆಗಳ ವಿವರ

| ಯೋಜನೆ | | ವರ್ಷ | ಅನುದಾನ | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|---|
| 1) | ಕಾರಂಜ | 1993-94 | 1161.24 | 1495.76 |
| | | 1994-95 | 2954.00 | 1528.74 |
| 2) | ಚುಲ್ಕಿನಾಲಾ | 1993-94 | 396.00 | 451.93 |
| | | 1994-95 | 392.00 | 338.89 |

ಊ) ಇಲ್ಲ

**ರಾಜ್ಯದಲ್ಲಿ ಹೊಸ ಅಗ್ನಿಶಾಮಕ ಠಾಣೆಗಳು**

2298 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ಎಷ್ಟು ಹೊಸ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲಾಗುವುದು (ಯಾವ ಯಾವ ಸ್ಥಳಗಳಲ್ಲಿ ಹೊಸ ಠಾಣೆಗಳನ್ನು ಪ್ರಾರಂಭಿಸಲಾಗುವುದು ಎಂಬುದರ ಬಗ್ಗೆ ವಿವರಗಳನ್ನು ಒದಗಿಸುವುದು)